ಸಂದಿಯಲ್ಲಿ ಒತ್ತಿ ಒತ್ತಿ ತೂರಿಸುವ ಅಭ್ಯಾಸ.

ನಾಗತ್ತೆ ಮಾತ್ರ ತನ್ನ ಮೊಮ್ಮಗಳ ರೂಪ ಲಕ್ಷಣವಾಗಿದ್ದರೂ ಅವಳ ಗ್ರಹಗತಿ ಚೆನ್ನಾಗಿಲ್ಲದಿರುವುದರಿಂದಲೇ ಮದುವೆಯಾಗಲಿಲ್ಲ ಎನ್ನುವಳು. ಭಟ್ಟರನ್ನ ಕರೆಸಿ ಶಾಂತಿ ಮಾಡಿಸುವಾ ಎಂಬ ಅವಳ ಮಾತನ್ನ ಯಾರೂ ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ. ಹಾಗೆ ನೋಡಿದರೆ ಮುದುಕಿಯ ಯಾವ ಮಾತಿಗೂ ಕಿವಿಗೊಡುವವರಿಲ್ಲ. ಅವಳನ್ನು ಕರೆತಂದದ್ದು ಗಂಡ ಹೆಂಡತಿ ದುಡಿಯಲು ಹೋದಾಗ ಅನ್ನ ಬೇಯಿಸಲಿಕ್ಕೆಂದೇ. 'ಈ ವಯಸ್ಸಾದಾಗ ಅಲ್ಲದೇ ಮತ್ತೆ ಯಾವಾಗ ಮಗನ ಹತ್ತಿರ ಇರೋದು' ಮುಂತಾಗಿ ಹೇಳಿ ಊರಿನಿಂದ ಕರೆತಂದಿದ್ದರು. ಮುದುಕಿಗೇನೂ ಇದು ಗೊತ್ತಿಲ್ಲದೇ ಇಲ್ಲ. ಆದರೂ ಹಾಗೆಂದು ತಾನೇ ಬಾಯಿಬಿಟ್ಟು ಹೇಳಿಬಿಟ್ಟರೆ ಈ ಮನೆಯಲ್ಲಿ ಇದ್ದ ಸ್ಥಾನಮಾನ ಕೈಜಾರಿ ಹೋದೀತೆಂಬುದೂ ಗೊತ್ತು. ಬೆಳಿಗ್ಗೆ ಮಗ ಸೊಸೆ ಹೊರಡುವ ವೇಳೆಗೆ ಸರಿಯಾಗಿ ತಿಂಡಿ ಮಾಡಿಕೊಡುವುದು. ನಂತರ ಮಧ್ಯಾಹ್ನ ಊಟದ ಡಬ್ಬಿಯವನ ವೇಳೆಗೆ ಸರಿಯಾಗಿ ಅಡಿಗೆ ಮಾಡಿಡುವುದು. ಸಂಜೆ ಮೈಲು ದೂರದ ರಾಘವೇಂದ್ರ ಮಠಕ್ಕೆ ಹೋಗಿ ಸ್ವರ್ಗದಲ್ಲೊಂದು ಸೀಟಿಗಾಗಿ ದೇವರಿಗೆ ಭಜನೆಯ ಲಂಚ ಒಪ್ಪಿಸುವುದು. ರಾತ್ರಿ 'ನಿಮಗೇಕೆ ತೊಂದರೆ' ಎಂದು ರಾತ್ರಿಯೂಟವನ್ನು ಸೊಸೆಯೇ ವಹಿಸಿಕೊಂಡು ತನಗಿಷ್ಟವಾದ್ದನ್ನು ತಯಾರಿಸುತ್ತಾಳೆ.

ಇದರ ಬದುಕಿನ ಗಡಿಯಾರದ ಟಿಕ್‌ಟಿಕ್‌ಗೆ ಹೊಂದಿಕೊಳ್ಳಲು ಪೇಯಿಂಗ್‌ಗೆಸ್ಟ್ ಆಗಿ ಅವರ ಮನೆ ಸೇರಿದ ರಾಮಚಂದ್ರನ ಒದ್ದಾಟ. ಕೆಲವೊಮ್ಮೆ ಬೆಳಿಗ್ಗೆ ಆರರಿಂದ ಎರಡರವರೆಗೆ, ಮತ್ತೊಮ್ಮೆ ಎರಡರಿಂದ ರಾತ್ರಿ ಹತ್ತರವರೆಗೆ ಅವನ ನೌಕರಿ. ರಾಮಚಂದ್ರನಿಗೆ ಸೀತಾರಾಮು, ಜಾನಕಿಯರು ಮುಖಾಮುಖಿ ಸಿಗುವುದೇ ಅಪರೂಪ. ಅವರಿಗೆ ಭಾನುವಾರ ರಜೆಯಾದರೆ ಇವನಿಗೆ ಬುಧವಾರ. ಅವನು ಮನೆಯಲ್ಲಿದ್ದಾಗ ನಾಗತ್ತೆ, ರೇವತಿ ಇರುತ್ತಿದ್ದರು. ರೇವತಿಯೊಡನೆ ಅಷ್ಟು ಮಾತಾಡುತ್ತಲೂ ಇರಲಿಲ್ಲ. ಅವಳಲ್ಲಿ ವಿಶೇಷ ಆಸಕ್ತಿಯೂ ಇರಲಿಲ್ಲ. ಅವಳನ್ನ ಕಂಡರೆ ಮಿಶನರಿ ಆಸ್ಪತ್ರೆಯ ನರ್ಸ್‌ಳನ್ನು ಕಂಡಂತೆನಿಸುತ್ತಿತ್ತು. ಎರಡನೇ ಶಿಫ್ಟ್ ಇದ್ದ ದಿನಗಳಲ್ಲಿ ರಾತ್ರಿ ಹನ್ನೊಂದು ಗಂಟೆಗೆ ಬಂದಾಗ ಅರೆನಿದ್ದೆಯಲ್ಲಿ ಮುದುಕಿ ಪಿಟಗುಡುತ್ತ ಬಾಗಿಲು ತೆರೆಯುವಳು. ತಲೆಯಿಂದ ಹೆಗಲಿಗೆ ಜಾರಿದ ಸೆರಗನ್ನ ಸರಿಪಡಿಸಿಕೊಳ್ಳದೇ ಬೋಳು ತಲೆಯ ದರ್ಶನ ಮಾಡಿಸುತ್ತ ಪಕಪಕ ಬೊಚ್ಚು ಬಾಯಿ ಆಡಿಸಿ ಬಡಿಸುವಳು. ಮಲಗಿದವರಿಗೆ ಎಚ್ಚರವಾಗದಂತೆ ಜಾಸ್ತಿ ಸದ್ದು ಮಾಡದೇ ಊಟ ಮಾಡಬೇಕು. ಅತಿ ಎಚ್ಚರಿಕೆಯಿಂದ ಲೋಟವೋ ಪ್ಲೇಟೋ ಕೈ ಜಾರಿ ಬಿದ್ದರೆ ಮೌನ ಕಲಕುವ ಶಬ್ದಕ್ಕೆ ಮನೆಯ ಯಜಮಾನನಿಗೆ ಎಚ್ಚರವಾಗಿ, ಕೆದರಿದ ಕೂದಲು, ನಿದ್ದೆ ತುಂಬಿದ ಕಣ್ಣುಗಳಿಂದ ದುರುಗುಟ್ಟಿ ನೋಡುತ್ತ. ಬಚ್ಚಲಿಗೆ ಹೋಗಿಬಂದು, ಬೆನ್ನನ್ನೋ, ತೋಳನ್ನೋ, ಪರಪರ ಕೆರೆದು, ಪಾಯಿಜಾಮದ ಲಾಡಿಯನ್ನು ಒಳತೂರಿಸುತ್ತ, ಮರಳಿ ಬೆಡ್‌ರೂಂ ಸೇರುವನು. ಊಟದ ನಂತರ ರಾಮಚಂದ್ರ ಮೆಲ್ಲನೆ ನಡೆದು ಗ್ಯಾಲರಿಗೆ ಹೋಗಬೇಕು. ದೊಡ್ಡದೇ ಆಗಿರುವ ಗ್ಯಾಲರಿಗೆ ಕಬ್ಬಿಣದ ಕಟಾಂಜನ ಕೂರಿಸಿ ಅದಕ್ಕೆ ಗ್ಲಾಸಿನ ಬಾಗಿಲು ಹಾಕಿಸಿ ರೂಮಿನ ಥರ ಮಾಡಿದ್ದಾರೆ. ಅದು ರಾಮಚಂದ್ರನ ರೂಮು. ಪ್ರತಿತಿಂಗಳ ಮುನ್ನೂರು ರೂಪಾಯಿಯಲ್ಲಿ ಇದರ ಬಾಡಿಗೆಯೂ ಸೇರಿತ್ತು. ಗ್ಯಾಲರಿಗೆ ಪ್ರತ್ಯೇಕ ಲೈಟಿನ ವ್ಯವಸ್ಥೆ ಇರುವುದರಿಂದ ಮಲಗುವ ಮುನ್ನ ಕೆಲವೊಮ್ಮೆ ಮ್ಯಾಗಸಿನ್ ತಿರುವಿಹಾಕುತ್ತಿದ್ದ. ಖರ್ಚನ್ನ ಲೆಕ್ಕ ಬರೆಯುವುದಂತೂ ಇದ್ದೇ ಇತ್ತು. ಅಪರೂಪಕ್ಕೊಮ್ಮೆ ಊರಿನ ಗೆಳೆಯ ಪುರುಷೋತ್ತಮನಿಗೆ ಪತ್ರ ಬರೆಯುತ್ತಿದ್ದುದೂ ಉಂಟು.